ಓ ಎಸ್ ನಂಃ 577/2014

ಡಿ. ಡಬ್ಲ್ಯೂ ಃ 1

ದಿಃ 05.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ

ವಾದಿ ಜುಂಜಯ್ಯ ನನ್ನ ಚಿಕ್ಕಪ್ಪನಾಗಬೇಕು. ವಾದಿಯು ನಾವು ಭಾಗವಾಗಿಲ್ಲ, ಭಾಗ ಕೊಡಿ ಎಂದು ಕೇಳಿ ದಾವೆ ಮಾಡಿದ್ದರು. ನಮ್ಮ ತಂದೆ ಜೀವಂತವಾಗಿದ್ದಾರೆ. ನನ್ನ ತಂದೆಯ ಸಾಕ್ಷಿ ವಿಚಾರಣೆಯನ್ನು ಮಾಡಿಸುತ್ತೇನೆ. ಪ್ರತಿವಾದ ಪತ್ರ ಸಲ್ಲಿಸಲು ನಾವು ಎಲ್ಲ ಪ್ರತಿವಾದಿಗಳು ಸೇರಿ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇವೆ. ನನ್ನ ಅಣ್ಣ ತಮ್ಮಂದಿರು ನನ್ನ ಪರವಾಗಿ ಕೇಸ್ ನಡೆಸು ಎಂದು ನನಗೆ ಅಧಿಕಾರಪತ್ರ ಕೊಟ್ಟಿಲ್ಲ, ಆದರೆ ನಾನು ಅವರ ಪರವಾಗಿಯೂ ಸಾಕ್ಷಿ ಹೇಳುತ್ತಿದ್ದೇನೆ.

ವಾದಿಯು 3 ಸ.ನಂಬರ್ ಗಳಿಗೆ ಸಂಬಂಧಿಸಿದಂತೆ ಒಟ್ಟು 6 ಐಟಂ ಸ್ವತ್ತುಗಳಿಗಾಗಿ ದಾವೆ ಮಾಡಿದ್ದಾರೆ. ಎಲ್ಲ ದಾವಾ ಸ್ವತ್ತುಗಳ ಕಂದಾಯ ದಾಖಲೆಗಳು ಪ್ರತಿವಾದಿ 2 ರಿಂದ 4 ರವರ ಹೆಸರಿನಲ್ಲಿವೆ. 2005 ರಲ್ಲಿ ನನ್ನ ಚಿಕ್ಕಪ್ಪನಿಗೆ ಆಗಿದ್ದ ಭಾಗಪಟ್ಟಿ, ವಾದಿಯ ಕಡೆಯಿಂದ ನಮ್ಮ ತಂದೆ ತೆಗೆದುಕೊಂಡಿದ್ದ ಕ್ರಯಪತ್ರ ಇವುಗಳನ್ನು ಕೊಟ್ಟು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇವೆ. ವಿಭಾಗಪತ್ರದ ಆಧಾರದ ಮೇಲೆ ಜುಂಜಯ್ಯ ಮತ್ತು ರಾಮಲಿಂಗಯ್ಯ ಇವರ ಮಧ್ಯೆ ಯಾವುದೆ ಖಾತೆ ಬದಲಾವಣೆ ಆಗಿಲ್ಲ. ನಮ್ಮ ತಂದೆ ಮತ್ತು ಚಿಕ್ಕಪ್ಪ ಇವರು ಖಾತೆ ಮಾಡಿಸಿಕೊಳ್ಳದ ಕಾರಣ 1975 ರಲ್ಲಿ ಭಾಗವಾಗಿದ್ದರೂ ಸಹ ಆರ್ ಟಿ ಸಿ ಗಳು ಅವರ ಹೆಸರಿನಲ್ಲಿ ಆಗಿರಲಿಲ್ಲ. ನಮ್ಮ ತಂದೆ ಹೆಸರಿನಲ್ಲಿ ವಿಭಾಗದಂತೆ ಖಾತೆಯಾಗಿರಲಿಲ್ಲ ಎಂದರೆ ಸರಿ. ನೇರವಾಗಿ ನಮ್ಮ ಹೆಸರಿನಲ್ಲಿ ಆಗಿರುತ್ತವೆ ಎಂದು ಸಾಕ್ಷಿ ಹೇಳುತ್ತಾರೆ.

1975 ರ ವಿಭಾಗಪತ್ರದ ಆಧಾರದ ಮೇಲೆ ನಮ್ಮ ಹೆಸರಿನಲ್ಲಿ ಖಾತೆ ಆಗಿಲ್ಲ. ನಮ್ಮ ತಂದೆಗೆ ಆಗಿದ್ದ ಕ್ರಯಪತ್ರ ಹಾಗೂ ವಿಭಾಗಪತ್ರದ ಆಧಾರದ ಮೇಲೆ ನೇರವಾಗಿ ನಮ್ಮ ಹೆಸರಿನಲ್ಲಿ ಖಾತೆಯಾಗಿದೆ. ಆ ರೀತಿ ಮ್ಯುಟೇಷನ್ ಆಗಿದೆ, ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸಾಕ್ಷಿ ಪುನಃ ಹೇಳುತ್ತಾರೆ 1975 ರ ವಿಭಾಗಪತ್ರ ಅಥವಾ ಕ್ರಯಪತ್ರದ ಆಧಾರದ ಮೇಲೆ ನಮ್ಮ ಹೆಸರಿನಲ್ಲಿ ಖಾತೆ ಆಗಿಲ್ಲ ಆದರೆ ನಾವು ಮಾಡಿಕೊಂಡ ವಿಭಾಗಪತ್ರದ ಆಧಾರದಲ್ಲಿ ಖಾತೆಯಾಗಿರುತ್ತದೆ. ನಾವು ವಿಭಾಗ ಮಾಡಿಕೊಂಡ ಸಂದರ್ಭದಲ್ಲಿ ದಾವಾ ಸ್ವತ್ತುಗಳು ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಆಗಿರಲಿಲ್ಲ ಎಂದರೆ ಸರಿ. ನಮ್ಮ ತಾತನ ಹೆಸರಿನಲ್ಲಿದ್ದ ಜಮೀನುಗಳನ್ನು ಪ್ರತಿವಾದಿ 2 ರಿಂದ 4 ರವರಾದ ನಾವು

ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ.

ದಾವಾ ಸ್ವತ್ತುಗಳು ನಮ್ಮ ತಾತ ರೇವಯ್ಯ ಇವರಿಗೆ ಸೇರಿದ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿ. ನಮ್ಮ ತಾತ ಬದುಕಿದ್ದಾಗ ವಾದಿಗೆ ಮತ್ತು 1ನೆ ಪ್ರತಿವಾದಿಗೆ ಆಸ್ತಿಯನ್ನು ಹಂಚಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಹಂಚಿಕೊಟ್ಟಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ವಾದಿಗೆ ದಾವಾ ಆಸ್ತಿಯಲ್ಲಿ ಯಾವುದ ಭಾಗ ಸಿಗಬಾರದು ಎಂಬ ಕಾರಣಕ್ಕೆ ನಮ್ಮ ತಾತ ಇದ್ದಾಗ ಆಸ್ತಿಯನ್ನು ಹಂಚಿದ್ದಾರೆ ಎಂದು ಸುಳ್ಳು ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರ ಬರೆದುಕೊಡುವ ಕಾಲಕ್ಕೆ ಜುಂಜಯ್ಯನ ಹೆಸರಿನಲ್ಲಿ ಖಾತೆಯಾಗಿರಲಿಲ್ಲ ಎಂದರೆ ಸರಿ. ಆಗ ನಮ್ಮ ತಾತ ರೇವಯ್ಯನ ಹೆಸರಿನಲ್ಲಿ ಆ ಸ್ವತ್ತು ಇತ್ತು ಎಂದರೆ ಸರಿ. ಕ್ರಯಪತ್ರವನ್ನು ನಾನು ಮತ್ತು ನಮ್ಮ ತಂದೆ ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರವಾಗಿದೆ ಎನ್ನುವ ಆಧಾರದಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1975 ರಲ್ಲಿ ಹಂಚಿಕೆಯಾಗಿದ್ದರೆ ತಕ್ಷಣ ನನ್ನ ತಂದೆ ಅಥವಾ ವಾದಿ ಖಾತೆ ಮಾಡಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ, ವಿಭಾಗಪತ್ರ ಸೃಷ್ಟಿತ ದಾಖಲೆಯಾಗಿದ್ದರಿಂದ 1975 ರಲ್ಲಿ ಅಥವಾ ಅದರ ನಂತರದ ವರ್ಷದಲ್ಲಿ ಖಾತೆ ಬದಲಾವಣೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಮಾಡಿಕೊಳ್ಳುವ ಸಮಯದಲ್ಲಿ ವಾದಿಗೆ ನಾವು ಯಾವುದೆ ನೋಟೀಸ್ ಕೊಡಿಸಿಲ್ಲ. ಆದರೆ ಖಾತೆ ಬದಲಾವಣೆ ಮಾಡಿಕೊಡು ಎಂದು ನಾವು ಹೋಗಿ ಕೇಳಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯನ್ನು ಹೋಗಿ ಕೇಳಿದ್ದರ ಬಗ್ಗೆ ಯಾವುದೆ ದಾಖಲೆ ನಮ್ಮ ಬಳಿ ಇಲ್ಲ. ನಮ್ಮ ತಾತನಿಗೆ ಸೇರಿದ ಆಸ್ತಿಯನ್ನು ನಾನು ಒಬ್ಬನೇ ಹೊಡೆಯಬೇಕೆಂಬ ಉದ್ದೇಶದಿಂದ ನೇರವಾಗಿ ನಮ್ಮ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಜುಂಜಯ್ಯ ಇವರು ಬರೆದುಕೊಟ್ಟಿದ್ದರೂ ಎನ್ನುವ ಕ್ರಯಪತ್ರ ನೋಂದಣಿಯಾಗಿಲ್ಲ. ಕ್ರಯಪತ್ರ ಬರೆದ ಮರುದಿನ ರಜೆ ಇದ್ದುದ್ದರಿಂದ ಅದನ್ನು ನೋಂದಣಿ ಮಾಡಿಕೊಳ್ಳಲು ಆಗಿರಲಿಲ್ಲ, ನಂತರದಲ್ಲಿ ವಾದಿ ಕ್ರಯಪತ್ರ ಬರೆದುಕೊಡಲು ಬರದೇ ಸತಾಯಿಸಿರುತ್ತಾರೆ, ನಾವು ಕರೆದರೂ ಅವರು ಬಂದಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 1985 ರಲ್ಲಿ ಕ್ರಯಪತ್ರ ಬರೆದುಕೊಟ್ಟಿದ್ದರು ಎನ್ನಲಾದ ನಂತರ ನಾವು ಅಥವಾ ನಮ್ಮ ತಂದೆ ವಾದಿಗೆ ಕ್ರಯಪತ್ರ ನೋಂದಣಿ ಮಾಡಿಕೊಡಬೇಕೆಂದು ಹೇಳಿ ನೋಟೀಸ್ ಕೊಡುವುದಾಗಲಿ ಅಥವಾ ಯಾವುದೆ ಕಾನೂನು ಕ್ರಮ ತೆಗೆದುಕೊಂಡಿಲ್ಲ. ನಮಗೆ ಚಿಕ್ಕಪ್ಪನ ಮೇಲೆ ನಂಬಿಕೆ ಇದ್ದುದ್ದರಿಂದ ಯಾವುದೆ ಕಾನೂನು ಕ್ರಮ ತೆಗೆದುಕೊಂಡಿಲ್ಲ. ವಾದಿಯು ನಮ್ಮ ತಂದೆಗೆ ಯಾವುದೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ, ಅದು ಸೃಷ್ಟಿತ ದಾಖಲೆಯಾಗಿದ್ದರಿಂದ ನಾವು ಯಾವುದೆ ಕ್ರಮ ತೆಗೆದುಕೊಂಡಿಲ್ಲ ಎಂದರೆ

ಸರಿಯಲ್ಲ.  ನನ್ನ ಚಿಕ್ಕಪ್ಪ ಅದರಲ್ಲಿ ಸಹಿ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಎ ಎಸ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**